# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ–61 & 123/2011/ಡಿಆರ್‌ಇ–3

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿ:06–06–2016.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ : (1) ಶ್ರೀ. ಜೆ. ಮಲ್ಲಿಕಾರ್ಜುನ, ನಿವೃತ್ತ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯತಿ, ಯಾದಗಿರಿ, (2) ಶ್ರೀ ಸಿದ್ದಲಿಂಗಪ್ಪ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯತಿ, (3) ಶ್ರೀ. ವೀರಭದ್ರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಯಾದಗಿರಿ (ಪ್ರಸ್ತುತ ಪಿಆರ್‌ಇ ಉಪ ವಿಭಾಗ, ಲಿಂಗಸೂಗುರು, ರಾಯಚೂರು ಜಿಲ್ಲೆ), (4) ಶ್ರೀ. ಕೆ. ಬೀಮರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಯಾದಗಿರಿ (ಪ್ರಸ್ತುತ ಪಿಆರ್‌ಇ ಉಪ ವಿಭಾಗ, ಲಿಂಗಸೂಗುರು, ರಾಯಚೂರು ಜಿಲ್ಲೆ), (5) ಶ್ರೀ ತಮ್ಮಪ್ಪ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯತಿ, ಯಾದಗಿರಿ ತಾಲ್ಲೂಕು, (ಪ್ರಸ್ತುತ ಪಿಡಿಓ, ಕೆ. ಪುಟಪಾಕ ಗ್ರಾಮ ಪಂಚಾಯತಿ), (6) ಶ್ರೀ. ವಿಶ್ವನಾಥ ರೆಡ್ಡಿ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯತಿ, ಯಾದಗಿರಿ ಮತ್ತು (7) ಶ್ರೀ. ಗೋಪಾಲಕೃಷ್ಣ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯತಿ (ಪ್ರಸ್ತುತ ಪಿ.ಡಿ.ಓ. ಜಯಗ್ರಾಮ ಗ್ರಾಮ ಪಂಚಾಯತಿ)ರವರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿ ದುರ್ನಡತೆಯೆಸಗಿರುವ ಸಂಬಂಧ ಅವರ ವಿರುದ್ಧದ – ನಡವಳಿಕೆ ಕುರಿತು.

****

ಶ್ರೀ. ಶೇಖ್ ಮುಕಬಲ್ ಅಹಮದ್ ಬಿನ್ ಶೇಕ್ ಮೊಹಮದ್ ಉಸ್ಮಾನ್, ಎಸ್.ಹೊಸಹಳ್ಳಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ

"ದೂರುದಾರರು" ಎಂದು ಕರೆಯಲ್ಪಡುತ್ತಾರೆ)ರವರು ಎದುರುದಾರರುಗಳ ವಿರುದ್ಧ ನೀಡಿದ್ದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿ ತನಿಖೆಗೆ ಸ್ವೀಕರಿಸಿ, ಮುಂದಿನ ಕ್ರಮ ಜರುಗಿಸಲಾಗಿರುತ್ತದೆ.

2) ದೂರುದಾರರು ಸಲ್ಲಿಸಿರುವ ದೂರಿನ ಸಾರಾಂಶವೇನೆಂದರೆ;

- 2009–10ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸುಮಾರು 25 ರಿಂದ 40 ಲಕ್ಷದವರೆಗೆ ಎಂ.ಐ.ಎಸ್. ಮಾಡಿಸದೇ ಯಾವುದೇ ಬಿಲ್ ಇಲ್ಲದೇ ಹಣವನ್ನು ಕೆಲವು ಸದಸ್ಯರು ಮತ್ತು ಹಳೆ ಕಾರ್ಯದರ್ಶಿಯವರು ಸೇರಿ ವೈಯುಕ್ತಿಕ ಹೆಸರಿನಲ್ಲಿ ಡಿ.ಸಿ.ಸಿ., ಬ್ಯಾಂಕ್, ಹತ್ತಿಕುಣಿ ಮತ್ತು ಕೆ.ಜಿ.ಬಿ., ಯಾದಗಿರಿಯಲ್ಲಿ ಡ್ರಾ ಮಾಡಿಕೊಂಡಿರುತ್ತಾರೆ.
- 2010–11ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಇಲ್ಲದ ಅನೇಕ ಕಾಮಗಾರಿಗಳನ್ನು ಮಾಡಲು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಾಂತ್ರಿಕ ಮಂಜೂರಾತಿ ನೀಡಲು ನಿರಾಕರಿಸಿದ್ದು, ಕಿರಿಯ ಅಭಿಯಂತರರು ಸದರಿ ಕಾಮಗಾರಿಗಳಿಗೆ ಸಹಕಾರ ನೀಡುತ್ತಿದ್ದಾರೆ.
- ಗ್ರಾಮ ಸ್ವರಾಜ್ ಯೋಜನೆಯ ಅನುದಾನದಲ್ಲಿ ಯಾವುದೇ ಕಾಮಗಾರಿಯನ್ನು ನಿರ್ವಹಿಸದೇ ಬಿಲ್ಲನ್ನು ಮಾಡಿ ಅನುದಾನದ ದುರುಪಯೋಗ ಪಡಿಸಿಕೊಂಡಿರುತ್ತಾರೆ.
- 13ನೇ ಹಣಕಾಸು ಯೋಜನೆಯ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

3) ಗೌರವಾನ್ವಿತ ಉಪಲೋಕಾಯುಕ್ತರು ದಿ: 04.02.2012ರ ಆದೇಶದಂತೆ ಸದರಿ 2 ದೂರಿನ ತನಿಖೆ ಕೈಗೊಳ್ಳಲು ಈ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ದಿನಾಂಕ: 24/08/2011 ಮತ್ತು 18/02/2012 ರಂದು ವಹಿಸಿದ್ದು, ಸದರಿಯವರು ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/61/2011 ಮತ್ತು ಕಂಪ್ಲೆಂಟ್/ಉಪಲೋಕ್/ಜಿ.ಎಲ್.ಬಿ/123/ 2011 ಎರಡು ದೂರು ಪ್ರಕರಣಗಳನ್ನು ಒಟ್ಟುಗೂಡಿಸಿ ದೂರಿನ ತನಿಖೆ ಕೈಗೊಳ್ಳಲು ತನಿಖಾಧಿಕಾರಿಗಳಾದ ಶ್ರೀ ಹೆಚ್.ಆರ್.ನಾರಾಯಣರಾವ್, ಲೆಕ್ಕಾಧೀಕ್ಷಕರು–1 (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರಿಗೆ ವಹಿಸಿದ್ದು, ತನಿಖಾಧಿಕಾರಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹೊನಗೇರಾ ಗ್ರಾಮ ಪಂಚಾಯತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ ಹಾಗೂ ಎದುರುದಾರರಿಂದ ವಿವರಣಾ ವರದಿ ಹಾಗೂ ದಾಖಲಾತಿಗಳನ್ನು ಪಡೆದುಕೊಂಡು ತನಿಖೆ ಕೈಗೊಂಡು, ದಿ: 29.04.2014ರಂದು ತಮ್ಮ ವರದಿಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

(1) 1ನೇ ಆರೋಪವಾದ 2009–10ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸುಮಾರು 25 ರಿಂದ 40 ಲಕ್ಷದವರೆಗೆ ಎಂ.ಐ.ಎಸ್. ಮಾಡಿಸದೇ ಯಾವುದೇ ಬಿಲ್ ಇಲ್ಲದೇ ಹಣವನ್ನು ಕೆಲವು ಸದಸ್ಯರು ಮತ್ತು ಹಳೆ ಕಾರ್ಯದರ್ಶಿಯವರು ಸೇರಿ ವೈಯುಕ್ತಿಕ ಹೆಸರಿನಲ್ಲಿ ಡಿ.ಸಿ.ಸಿ., ಬ್ಯಾಂಕ್, ಹತ್ತಿಕುಣಿ ಮತ್ತು ಕೆ.ಜಿ.ಬಿ., ಯಾದಗಿರಿಯಲ್ಲಿ ಡ್ರಾ ಮಾಡಿಕೊಂಡಿರುತ್ತಾರೆ ಎಂಬ ಆಪಾದನೆಗೆ ಸಂಬಂಧಿಸಿದಂತೆ, "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೃಷ್ಣ ಗ್ರಾಮೀಣ ಬ್ಯಾಂಕ್, ಯಾದಗಿರಿ ಶಾಖೆಯ ಖಾತೆ ಸಂಖ್ಯೆ: 2099203796ರ ಬ್ಯಾಂಕ್ ಪಾಸ್ ಪುಸ್ತಕವನ್ನು ಪರಿಶೀಲಿಸಲಾಗಿ, ಬ್ಯಾಂಕ್‌ನಿಂದ ಹಣವನ್ನು ಚೆಕ್ಕು ಮೂಲಕ

ಹಿಂಪಡೆದಿದ್ದು, ಶ್ರೀ ವಿಶ್ವನಾಥರೆಡ್ಡಿ, ಹಿಂದಿನ ಸದಸ್ಯರು (ಹಾಲಿ ಅಧ್ಯಕ್ಷರು), ಹೊನಗೇರಾ ಗ್ರಾಮ ಪಂಚಾಯಿತಿ ಇವರಿಗೆ ರೂ.6,10,677/-, ಸದಸ್ಯರಾದ ಶ್ರೀ ರವೀಂದ್ರ, ಇವರಿಗೆ ರೂ.9,53,888/- ಹಾಗೂ ಶ್ರೀ.ನಿಂಗಪ್ಪ ಗುಡಗುಡಿ ಇವರಿಗೆ ಯಾವುದೇ ವಿವರಗಳಿಲ್ಲದೇ ರೂ.2,29,637/- ಮತ್ತು ಶ್ರೀ ಆನಂದ ಇವರಿಗೆ ರೂ.5,99,246/- ಈ ರೀತಿ ಒಟ್ಟು ರೂ.23,93,448/- ಲಕ್ಷ ಹಣವನ್ನು ಪಾವತಿಸಿರುವುದು ನಿಯಮ ಬಾಹಿರವಾಗಿರುತ್ತದೆಂದು ತಿಳಿಸಿರುತ್ತಾರೆ ಹಾಗೂ ಇದಕ್ಕೆ

(1) ಶ್ರೀ ಜೆ.ಮಲ್ಲಿಕಾರ್ಜುನ್, ನಿವೃತ್ತ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಬೂತ್‌ಪೂರ್ ಗ್ರಾಮ ಮತ್ತು ಅಂಚೆ, ಸೇಡಂ ತಾಲ್ಲೂಕು, ಗುಲ್ಬರ್ಗಾ) ಹಾಗೂ

(2) ಶ್ರೀ ಸಿದ್ದಲಿಂಗಪ್ಪ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಇವರುಗಳು ಕಾರಣಕರ್ತರಾಗಿರುತ್ತಾರೆಂದು ತಿಳಿಸಿರುತ್ತಾರೆ".

(2)2ನೇ ಆರೋಪವಾದ 2010-11ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಇಲ್ಲದ ಅನೇಕ ಕಾಮಗಾರಿಗಳನ್ನು ಮಾಡಲು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ತಾಂತ್ರಿಕ ಮಂಜೂರಾತಿ ನೀಡಲು ನಿರಾಕರಿಸಿದ್ದು, ಕಿರಿಯ ಅಭಿಯಂತರರು ಸದರಿ ಕಾಮಗಾರಿಗಳಿಗೆ ಸಹಕಾರ ನೀಡುತ್ತಿದ್ದಾರೆ ಎಂಬ ಆಪಾದನೆಗೆ ಸಂಬಂಧಿಸಿದಂತೆ, "ಒಟ್ಟು 15 ಕಾಮಗಾರಿಗಳ ಪೈಕಿ 3 ಕಾಮಗಾರಿಗಳನ್ನು ನಿರ್ವಹಿಸಿ ಗುತ್ತಿಗೆದಾರರಿಗೆ ಸಾಮಗ್ರಿಗಳ ಬಿಲ್ಲನ್ನು ಮಾತ್ರ ಪಾವತಿಸಿರುತ್ತಾರೆ. ಇನ್ನುಳಿದ 12 ಕಾಮಗಾರಿಗಳ ಪೈಕಿ ಹೊನಗೇರಾ ಗ್ರಾಮದ ಹನುಮಾನ ಗುಡಿಯ ಹತ್ತಿರ ನಾಲೆ ಕಟ್ಟುವುದು ಮತ್ತು ಹೂಳೆತ್ತುವ ಕಾಮಗಾರಿಗೆ ರೂ.3 ಲಕ್ಷಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸದರಿ ಕಾಮಗಾರಿಗೆ ಎಂ.ಐ.ಎಸ್.ನಲ್ಲಿ

ದಿನಾಂಕ: 17/03/2011ರಂದು ಕಾಮಗಾರಿ ಸಂಕೇತ ಸಂಖ್ಯೆ: 1515010008/ಐಅ/99336689ರಡಿಯಲ್ಲಿ ಕೂಲಿ ಮತ್ತ ರೂ.1.74 ಲಕ್ಷ ಹಾಗೂ ಸಾಮಗ್ರಿ ಮೊತ್ತ ರೂ.1.19 ಲಕ್ಷ ಒಟ್ಟು ರೂ.2.93 ಲಕ್ಷಗಳಿಗೆ ಲೆಕ್ಕ ತೋರಿಸಿದ್ದು, ಆದರೆ, ಸದರಿ ಕಾಮಗಾರಿಯು 2010–11ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗದೇ ಇರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ. ಇನ್ನುಳಿದಂತೆ 11 ಕಾಮಗಾರಿಗಳನ್ನು ನಿರ್ವಹಿಸಿದ್ದರೂ ಸಹ ಬಿಲ್ಲು ಪಾವತಿ ಮಾಡಿರುವುದಿಲ್ಲ. ಈ ರೀತಿ ಕ್ರಿಯಾ ಯೋಜನೆಯಲ್ಲಿ ಅನುಮೋದನೆ ಪಡೆಯದೆ ಇದ್ದ ಕಾಮಗಾರಿಗೆ ಬಿಲ್ಲನ್ನು ತಯಾರಿಸಿರುವುದು ಹಾಗೂ ಕಾಮಗಾರಿ ನಿರ್ವಹಿಸಲು ಕಾರ್ಯಾದೇಶ ನೀಡಿರುವುದು ನಿಯಮ ಬಾಹಿರವಾಗಿರುತ್ತದೆಂದು ತಿಳಿಸಿರುತ್ತಾರೆ ಹಾಗೂ ಈ ಕರ್ತವ್ಯ ಲೋಪಕ್ಕೆ

(1) ಶ್ರೀ.ವೀರಭದ್ರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಯಾದಗಿರಿ ತಾಲ್ಲೂಕು (ಹಾಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸೂಗೂರು, ರಾಯಚೂರು ಜಿಲ್ಲೆ),

(2) ಶ್ರೀ ಕೆ.ಭೀಮಾರೆಡ್ಡಿ, ಹಿಂದಿನ ಕಿರಿಯ ಅಭಿಯಂತರರು, ಹೊನಗೇರಾ ಗ್ರಾಮ ಪಂಚಯಿತಿ (ಹಾಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ) (ನಿವೃತ್ತಿ ದಿನಾಂಕ; 30.06.2029)

(3) ಶ್ರೀ ತಮ್ಮಪ್ಪ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಹಾಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮುಟಪಾಕ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು (ನಿವೃತ್ತಿ ದಿನಾಂಕ; 28.02.2017) ಮತ್ತು

(4) ಶ್ರೀ ವಿಶ್ವನಾಥರೆಡ್ಡಿ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಇವರುಗಳು ಕಾರಣಕರ್ತರಾಗಿರುತ್ತಾರೆಂದು ತನಿಖಾ ವರದಿ ಸಲ್ಲಿಸಿರುತ್ತಾರೆ".

(3) 3ನೇ ಆರೋಪವಾದ ಗ್ರಾಮ ಸ್ವರಾಜ್ ಯೋಜನೆಯ ಅನುದಾನದಲ್ಲಿ ಯಾವುದೇ ಕಾಮಗಾರಿಯನ್ನು ನಿರ್ವಹಿಸದೇ ಬಿಲ್ಲನ್ನು ಮಾಡಿ ಅನುದಾನದ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂಬ ಆಪಾದನೆಗಳಿಗೆ ಸಂಬಂಧಪಟ್ಟಂತೆ, "ಎಸ್.ಹೊಸಳ್ಳಿಯಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆದಾರರು ನಿರ್ವಹಿಸದೇ ಇದ್ದರೂ ಸಹಾ ದಿನಾಂಕ: 15/07/2010 ರಂದು ಚೆಕ್ ಸಂಖ್ಯೆ: 228559ರಲ್ಲಿ ಶ್ರೀ ಅಮೃತರೆಡ್ಡಿ, ಹತ್ತಿಕುಣಿ ಗುತ್ತಿಗೆದಾರರು ಇವರಿಗೆ ಒಟ್ಟು ರೂ. 87,575/– ಗಳನ್ನು ನಗದು ಪುಸ್ತಕ ಪುಟ ಸಂಖ್ಯೆ: 2ರಲ್ಲಿ ಪಾವತಿಸಿದ್ದು, ಸದರಿ ಮೊತ್ತವು ಕೃಷ್ಣ ಗ್ರಾಮೀಣ ಬ್ಯಾಂಕ್, ಯಾದಗಿರಿ ಶಾಖೆ, ಬ್ಯಾಂಕ್ ಖಾತೆ ಸಂಖ್ಯೆ: 2099144171ರಲ್ಲಿ ದಿನಾಂಕ: 15/07/2010 ರಂದು ಹಿಂಪಡೆತವಾಗಿರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ದಿನಾಂಕ: 27/07/2010ರಂದು ಗುತ್ತಿಗೆದಾರರಾದ ಶ್ರೀ ಅಮೃತರೆಡ್ಡಿ, ಹತ್ತಿಕುಣಿ ಗುತ್ತಿಗೆದಾರರು ಇವರಿಂದ ಒಟ್ಟು ರೂ.87,575/– ಗಳನ್ನು ವಾಪಸ್ಸು ಪಡೆದು ದಿನಾಂಕ: 27/07/2010ರ ನಗದು ಪುಸ್ತಕ ಪುಟ ಸಂಖ್ಯೆ: 3ರಲ್ಲಿ ಜಮೆ ತೆಗೆದುಕೊಂಡು ದಿನಾಂಕ: 27/07/2010 ರಂದು ಬ್ಯಾಂಕ್ ಖಾತೆಗೆ ಜಮೆ ಮಾಡಿರುವುದು ಬ್ಯಾಂಕ್ ಪಾಸ್ ಪುಸ್ತಕದಿಂದ ಸ್ಪಷ್ಟವಾಗಿರುತ್ತದೆ. ಸದರಿ ಕಾಮಗಾರಿ ಅನುಮೋದನೆ ಆಗದೇ ಇದ್ದರೂ ಸಹಾ ಗುತ್ತಿಗೆದಾರರಿಗೆ ದಿ: 15.07.2010ರಂದು ಹಣವನ್ನು ನೀಡಿ ದಿ: 27.07.2010ರಂದು ವಾಪಸ್ಸು ಪಡೆದಿದ್ದು, ತಾತ್ಕಾಲಿಕ ಹಣ ದುರುಪಯೋಗವಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ಸದರಿ ದುರುಪಯೋಗಕ್ಕೆ ಈ ಕೆಳಕಂಡ ಅಧಿಕಾರಿಗಳು ಕಾರಣಕರ್ತರಾಗಿರುತ್ತಾರೆ.

(1) ಶ್ರೀ ಗೋಪಾಲಕೃಷ್ಣ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಜಯಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು (ನಿವೃತ್ತಿ ದಿ: 30.11.2018) ಹಾಗೂ

(2) ಶ್ರೀ ವಿಶ್ವನಾಥರೆಡ್ಡಿ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು

ಈ ಮೇಲ್ಕಂಡ ಇಬ್ಬರು ಎದುರುದಾರರುಗಳು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ವರದಿ ಸಲ್ಲಿಸಿರುತ್ತಾರೆ".

4) ನಂತರ ವರದಿಯನ್ನಾಧರಿಸಿ (1) ಶ್ರೀ ಜೆ.ಮಲ್ಲಿಕಾರ್ಜುನ್, ನಿವೃತ್ತ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (2) ಶ್ರೀ ಸಿದ್ದಲಿಂಗಪ್ಪ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ, (3) ಶ್ರೀ ವೀರಭದ್ರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಯಾದಗಿರಿ ತಾಲ್ಲೂಕು (ಹಾಲಿ ಪಿ.ಆರ್.ಇ., ಸಬ್ ಡಿವಿಜ಼ನ್, ಲಿಂಗಸುಗೂರು, ರಾಯಚೂರು ಜಿಲ್ಲೆ), (4) ಶ್ರೀ ಕೆ. ಭೀಮಾರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಯಾದಗಿರಿ (ಹಾಲಿ ಪಿ.ಆರ್.ಇ., ಸಬ್ ಡಿವಿಜ಼ನ್, ಲಿಂಗಸುಗೂರು, ರಾಯಚೂರು ಜಿಲ್ಲೆ), (5) ಶ್ರೀ ತಮ್ಮಪ್ಪ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಪಿ.ಡಿ.ಓ., ಪುಟ್ಟಪಕ್ಕಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ), (6) ಶ್ರೀ ವಿಶ್ವನಾಥ್ ರೆಡ್ಡಿ, ಹಿಂದಿನ ಅಧ್ಯಕ್ಷರು, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ ಮತ್ತು (7) ಶ್ರೀ ಗೋಪಾಲಕೃಷ್ಣ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಪಿ.ಡಿ.ಓ., ಜಯ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ) (ಇನ್ನು ಮುಂದೆ ಕ್ರಮವಾಗಿ ಎದುರುದಾರ–1 ರಿಂದ 7' ಎಂದು ಸಂಭೋದಿಸಲಾಗುತ್ತದೆ) ಇವರುಗಳನ್ನು 1 ರಿಂದ 7ನೇ ಎದುರುದಾರರನ್ನಾಗಿ ಸೇರಿಸಿ ತನಿಖಾ ವರದಿಯನ್ನ 1 ರಿಂದ 7ನೇ ಎದುರುದಾರರಿಗೆ ಕಳುಹಿಸಿ ಅವರಿಂದ ಆಕ್ಷೇಪಣೆಯನ್ನು ಕರೆಯಲಾಗಿರುತ್ತದೆ.

5) 2ನೇ ಎದುರುದಾರರು ತನಿಖಾಧಿಕಾರಿಯವರ ವರದಿಗೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ ಹಾಗೂ 3ನೇ ಎದುರುದಾರರು ದಿ: 11.06.2014ರಂದು

ಮೃತ್ತಪಟ್ಟಿರುವುದಾಗಿ ವರದಿಯಾಗಿರುತ್ತದೆ. 1 ಮತ್ತು 4 ರಿಂದ 7ನೇ ಎದುರುದಾರರುಗಳು ತನಿಖಾಧಿಕಾರಿಗಳ ವರದಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅವರುಗಳ ವಿರುದ್ದ ವರದಿಯಾಗಿರುವ ಕರ್ತವ್ಯ ಲೋಪಗಳನ್ನ ಅಲ್ಲಗಳೆದಿರುತ್ತಾರೆ. 1, 4 ರಿಂದ 7ನೇ ಎದುರುದಾರರ ವಿರುದ್ದ ಕರ್ತವ್ಯ ಲೋಪ ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ ಸದರಿ ಎದುರುದಾರರುಗಳ ಆಕ್ಷೇಪಣೆಗಳನ್ನ ಈ ಸಂದರ್ಭದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

6) ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 1, 2, 4 ರಿಂದ 7ನೇ ಎದುರುದಾರರು ಮೇಲ್ಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

7) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1, 2, 4 ರಿಂದ 7ನೇ ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8) 3ನೇ ಎದುರುದಾರುದಾರರಾದ ಶ್ರೀ. ವೀರಭದ್ರಪ್ಪ – ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು ದಿ: 11/06/2014ರಂದು ಮೃತಪಟ್ಟಿರುವುದಾಗಿ ಎಸ್.ಪಿ., ಕಲೋ, ರಾಯಚೂರುರವರು ವರದಿ ಮಾಡಿದ್ದು, ಮರಣ ಸಮರ್ಥನಾ ಪತ್ರವನ್ನು ಹಾಜರುಪಡಿಸಿರುತ್ತಾರೆ. ಆ ಕಾರಣಕ್ಕಾಗಿ 3ನೇ ಎದುರುದಾರರ ವಿರುದ್ಧದ ಉದ್ದೇಶಿತ ನಡವಳಿಕೆಯನ್ನು ಕೈ ಬಿಡಬಹುದಾಗಿರುತ್ತದೆ.

9) 1ನೇ ಎದುರುದಾರರಾದ ಶ್ರೀ. ಜೆ. ಮಲ್ಲಿಕಾರ್ಜುನ – ನಿವೃತ್ತ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯತಿ ಇವರು ದಿ: 31.12.2012ರಂದು ನಿವೃತ್ತಿ ಹೊಂದಿದ್ದು, ಸದರಿ ಕರ್ತವ್ಯ ಲೋಪವು 2009–10 ಹಾಗೂ 2010–11ನೇ ಸಾಲಿಗೆ ಸಂಬಂಧಿಸಿದ್ದಾಗಿದ್ದು,

ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 1ನೇ ಎದುರುದಾರರ ವಿರುದ್ದ ಕೆ.ಸಿ.ಎಸ್.ಆರ್., 214 (2) (ಬಿ) (2) & 214 (3)ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಹಾಗಾಗಿ ಸದರಿಯವರ ವಿರುದ್ದ ಪ್ರಕ್ರಿಯೆಯನ್ನು ಕೈಬಿಡಬಹುದಾಗಿರುತ್ತದೆ.

10) 2ನೇ ಎದುರುದಾರರಾದ ಶ್ರೀ. ಸಿದ್ದಲಿಂಗಪ್ಪ ಹಾಗೂ 6ನೇ ಎದುರುದಾರರಾದ ಶ್ರೀ. ವಿಶ್ವನಾಥರೆಡ್ಡಿ ಇವರುಗಳು ಹೊನಗೇರಾ ಗ್ರಾಮ ಪಂಚಾಯತಿಯ ಹಿಂದಿನ ಅಧ್ಯಕ್ಷರುಗಳಾಗಿದ್ದು, ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11) ಆದಕಾರಣ, 4ನೇ ಎದುರುದಾರುದಾರರಾದ ಶ್ರೀ ಕೆ. ಭೀಮಾರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಯಾದಗಿರಿ (ಹಾಲಿ ಪಿ.ಆರ್.ಇ., ಸಬ್ ಡಿವಿಜ಼ನ್, ಲಿಂಗಸುಗೂರು, ರಾಯಚೂರು ಜಿಲ್ಲೆ), 5ನೇ ಎದುರುದಾರುದಾರರಾದ ಶ್ರೀ ತಮ್ಮಪ್ಪ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಪಿ.ಡಿ.ಓ., ಪುಟ್ಟಪಕ್ಕಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ), ಮತ್ತು 7ನೇ ಎದುರುದಾರುದಾರರಾದ ಶ್ರೀ ಗೋಪಾಲಕೃಷ್ಣ, ಹಿಂದಿನ ಕಾರ್ಯದರ್ಶಿ, ಹೊನಗೇರಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಪಿ.ಡಿ.ಓ., ಜಯಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ) ಇವರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಎಸಗಿರುವುದು ಕಂಡು ಬರುತ್ತದೆ.

12) ಆದುದರಿಂದ, 4, 5 ಮತ್ತು 7ನೇ ಎದುರುದಾರರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಲೋಕಾಯುಕ್ತ ಕಾಯ್ದೆ ಕಲಂ 12(3)ರ ಪ್ರಕಾರ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ. ಮುಂದುವರೆದು 2 ಹಾಗೂ 6ನೇ ಎದುರುದಾರರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ.

13) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕ.ಲೋ. ಕಾಯ್ದೆ ಕಲಂ 12(3)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.**

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು-1,
ಕರ್ನಾಟಕ ರಾಜ್ಯ, ಬೆಂಗಳೂರು.